# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.411-2016** **ಪಿ . ಡಬ್ಲುಃ 5**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ/ಗಂಡನ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಪರಮೇಶ<br>ಪುಟ್ಟಬುದ್ಧಿನಾಯಕ<br>40 ವರ್ಷ<br>ವ್ಯವಸಾಯ<br>ಸಿಂಧುವಳ್ಳಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 25-07-2024.** |

**ಮುಖ್ಯ ವಿಚಾರಣೆಃ   ವಾದಿ ಪರ ವಕೀಲರಾದ ಶ್ರೀ ಎಂ.ಬಿ ರವರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ  ಎಲ್ಲಾ ವಿಷಯಗಳು ಸತ್ಯವಾಗಿದ್ದು ಅದನ್ನು ನಾನೇ ಹೇಳಿ ಬರೆಯಿಸಿ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ.ಎಸ್.ಕೆ ವಕೀಲರಿಂದ**

ನನಗೆ ವಾದಿಯವರು ತಂದೆ-ತಾಯಿಯವರ ಹೆಸರು ಗೊತ್ತಿಲ್ಲ. ನನಗೆ ಪ್ರತಿವಾದಿಯವರ ತಾಯಿ ಹೆಸರು ಗೊತ್ತಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿ ಸರ್ವೇ ನಂ.334 ಆಗಿರುತ್ತದೆ. ದಾವಾ ಷೆಡ್ಯೂಲ್ ಸ್ವತ್ತಿನ ಪೂರ್ಣ ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ದಾವಾ ಸರ್ವೇ ನಂಬರಿನಲ್ಲಿ ಎಷ್ಟು ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ.  ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿ ಅತ್ತಿಗೆ ಮತ್ತು ನಾದಿನಿ ಆಗಬೇಕು. ವಾದಿ ಮತ್ತು ಪ್ರತಿವಾದಿಗೆ ಎಷ್ಟು ಎಕರೆ ಜಮೀನು ಬಂದಿದೆ ಎಂದು ನನಗೆ ಗೊತ್ತಿಲ್ಲ. ವಾದಿ ಹೆಸರಿನಲ್ಲಿ 0.14 ಗುಂಟೆ ಸ್ವತ್ತು

ಕ್ರಯವಾಗಿರುವ ವಿಚಾರವನ್ನು ವಾದಿಯವರು ಹೇಳುತ್ತಿದ್ದು ಆದರೆ ನಾನು ದಾಖಲಾತಿಗಳನ್ನು ನೋಡಿರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಪಕ್ಕದಲ್ಲಿ ನನಗೆ ಸೇರಿದ ಜಮೀನು ಇದ್ದು, ಅದರ ಸರ್ವೇ ನಂ.331 ಆಗಿರುತ್ತದೆ. ದಾವಾ ಷೆಡ್ಯೂಲ್ ಸರ್ವೇ ನಂಬರಿನಲ್ಲಿ ವಾದಿಯನ್ನು ಹೊರತುಪಡಿಸಿ ಸೋಮನಾಯಕ ಮತ್ತು ನಾಗಮ್ಮ ರವರು ವ್ಯವಸಾಯ ಮಾಡುತ್ತಿರುತ್ತಾರೆ. ನಾನು ವಾದಿಯವರ ಜಮೀನಿಗೆ ವ್ಯವಸಾಯದ ಕೆಲಸಕ್ಕೆ ಹೋಗುತ್ತಿದ್ದು, ಅವರು ನನ್ನ ಜಮೀನಿಗೆ ವ್ಯವಸಾಯದ ಕೆಲಸಕ್ಕೆ ಬರುತ್ತಿದ್ದು ಆಗಾಗಿ ನಾನು ದಾವಾ ಷೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ವಾದಿ ಇರುವುದನ್ನು ನೋಡಿದ್ದೇನೆ. ನಾನು ದಾವಾ ಷೆಡ್ಯೂಲ್ ಸ್ವತ್ತಿನ ಚೆಕ್ಕುಬಂದಿಯನ್ನು ಹೇಳಬಲ್ಲೆ ಪೂರ್ವಕ್ಕೆ: ವಾದಿಯವರ ಜಮೀನು, ಪಶ್ಚಿಮಕ್ಕೆ:-ಬಸವಯ್ಯ ರವರ ಜಮೀನು, ಉತ್ತರಕ್ಕೆ:-ಗೋಪಾಲಯ್ಯ ರವರ ಜಮೀನು ಹಾಗೂ ದಕ್ಷಿಣಕ್ಕೆ:- ಪ್ರತಿವಾದಿ ನಾಗಮ್ಮ ರವರ ಜಮೀನು ಇರುತ್ತದೆ. ನಾನು ವಾದಿಯವರ ಹೆಸರಿಗೆ ಆಗಿರುವ ಕ್ರಯ ಪತ್ರವನ್ನು ನೋಡದೇ ಇದ್ದರೂ ಸಹ ವಾದಿಯವರ ಕೋರಿಕೆ ಮೇರೆಗೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಪ್ರ.ದ. ನ್ಯಾ ದಂ. ನಂಜನಗೂಡು**